ಯನ್ನು ಸಲ್ಲಿಸಂತ್ತಾ ಬಂದಿದ್ದಾರೆ, ಅವರನ್ನು ನಾನು ಮನಸಾರೆ ಮೆಚ್ಚುತ್ತೇನೆ. ಭಯೋತ್ಪಾದನೆ ಅವ್ಯಾಹತವಾಗಿ ನಡೆಯುತ್ತಾ ಇದೆ ನಾನು ಪಂಜಾಬಿನ ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಸಂತ ಹರಚಂದ ಲೊಂಗೋವಾಲ ಮತ್ತು ಕೇಂದ್ರಸರ್ಕಾರದ ಜೊತೆ ರಾಜೀ ಒಡಂಬಡಿಕೆ ನಡೆಯುತ್ತಿರುವಾಗ, ಭಯೋತ್ಪಾದನೆ ವಿವಿಧ ಹಂತಗಳಲ್ಲಿ ನಡೆಯುತ್ತಿರುವ ವಿಚಾರವನ್ನು ನೋಡಿದರೆ ನಿಜವಾಗಿಯೂ ಎಲ್ಲರಿಗೂ ದೇಶವನ್ನು ಮತ್ತೆ ಕಳವಳಕ್ಕೆ ಈಡುಮಾಡಿರತಕ್ಕ ಸನ್ನಿವೇಶದಲ್ಲಿ ನಾವು ನಿರ್ಣಯ ಮೂವ್ ಮಾಡಬೇಕೆಂದು ಈ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಪಕ್ಷಬೇಧವಿಲ್ಲದೆ ನಡೆದಿರತಕ್ಕ ಘಟನೆಯನ್ನು ಖಂಡಿಸಬೇಕಾಗದೆ. ಲಲಿತ್‌ಮಾಕನ್ ಅವರ ಕೊಲೆಯಾಗ ತಕ್ಕ ಸಂದರ್ಭದಲ್ಲಿ ಅವರ ತಂದೆತಾಯಿಗಳು ಮನೆಯ ಉಪ್ಪರಿಗೆಯ ಮೇಲೆ ಇದ್ದರು. ಮಗ ಮತ್ತು ಸೊಸೆಯನ್ನು ಹೊಡೆದದ್ದನ್ನು ಅವರ ತಂದೆ ತಾಯಿಗಳು ನೋಡಿದ್ದಾರೆ. ಆಂಧ್ರಪ್ರದೇಶದ ರಾಜ್ಯ ಪಾಲರಾದ ಉಮಾಶಂಕರ ದಿಕ್ಷೀತ್‌ರವರ ಮಗಳು. ಅಳಿಯ ಅವರನ್ನು ಕೊಲೆ ಮಾಡಿದಾಗ ಆಂಧ್ರ ಪ್ರದೇಶದ ರಾಜ್ಯಪಾಲರು ಸಹ ದೆಹಲಿಯಲ್ಲಿದ್ದರು ಎಂದು ಗೊತ್ತಾಗಿದೆ. ಅವರ ದುಃಖವನ್ನು ಭರಿಸಲಿಕ್ಕೆ ದೇವರು ಅವರಿಗೆ ಶಕ್ತಿಯನ್ನು ಕೊಡಲಿಯೆಂದು ಮೃತರ ಕುಟುಂಬಕ್ಕೆ ನಾವು ಎಲ್ಲರೂ ಸೇರಿ ಸಾಂತಾಪ ಸೂಚಕ ನಿರ್ಣಯವನ್ನು ಮಾಡೋಣ. ಎಲ್ಲಾ ರಾಜಕೀಯ ಪಕ್ಷದವರು ಸಾರ್ವಜನಿಕರು ಒಗ್ಗಟ್ಟಿನಿಂದ ಇಂತಹ ಭಯೋತ್ಪಾದನೆಯನ್ನು ನಿಗ್ರಹ ಮಾಡಲಿಕ್ಕೆ ಕೆಲಸ ಮಾಡಬೇಕು. ಈ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಿಪಕ್ಷದ ನಾಯಕರು ವ್ಯಕ್ತಪಡಿಸಿ ದಂತಹ ಅಭಿಪ್ರಾಯಕ್ಕೆ ಯಾರದೂ ವಿರೋಧವಿಲ್ಲ. ನನ್ನ ಸಹೋದ್ಯೋಗಿಗಳಲ್ಲಿ ಒಬ್ಬರಾದ ರಘುಪತಿ ಯವರು ಲಲಿತ್‌ಮಾಕನ್ ದಂಪತಿಗಳ ಶವಸಂಸ್ಕಾರದಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದಾರೆ. ನಡೆದಂತಹ ಘಟನೆ ಅತ್ಯಂತ ಖಂಡನೀಯ. ಈ ಮನೆಯ ಅಭಿಪ್ರಾಯವನ್ನು ದಯವಿಟ್ಟು ಮೃತರ ಕುಟುಂಬಕ್ಕೆ ಕಳುಹಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು —ನಾನು ಕೂಡ ನಡೆದಂತಹ ದುರ್ಘಟನೆಯನ್ನು ಖಂಡಿಸಂತ್ತೇನೆ. ಮೃತರಿಗೆ ಚಿರಶಾಂತಿ ದೊರೆಯಲಿ ಎಂದು ಭಯಸುತ್ತೇನೆ. ಮೃತರ ಕುಟುಂಬದವರಿಗೆ ದುಃಖವನ್ನು ಭರಿಸತಕ್ಕ ಶಕ್ತಿಯನ್ನು ದೇವರು ಕೊಡಲಿಯೆಂದು ಹೇಳುತ್ತೇನೆ.

Call Attentoin Notice

Re (1) Serious consequenees arising out of false caste certificates produced by non SC and ST candidates while entering into Government services depriving the legitimate claims of SC and ST

SRI B. BASAVALINGAPPA.—I call the attention of the Minister for Social Welfare to the serious conseqnences arising out of false caste certificates produced by non SC and ST candidates while entering nto Government services depriving the legitimate claims of SC and ST

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ...

ಶ್ರೀ ಬಿ. ಬಸವಲಿಂಗಪ್ಪ.—ನವಂಗೆ ಉತ್ತರದ ಪ್ರತಿಗಳು ಬಂದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಂದು ಆ ಬಗ್ಗೆ ಪ್ರಸ್ತಾವನೆ ಬರುತ್ತದೆಂದು ಗೊತ್ತಿದ್ದರೂ ಕೂಡ ಅವರು ಉತ್ತರದ ಪ್ರತಿಗಳನ್ನು ಒದಗಿಸಲಿಲ್ಲ ಅಂದರೆ ಹೇಗೆ?

ಅಧ್ಯಕ್ಷರು.—ಉತ್ತರದ ಪ್ರತಿಗಳು ಇಲ್ಲವೇ?

ಶ್ರೀ ವಿ.ಎಲ್. ಪಾಟೀಲ್.—ಇಲ್ಲ.

ಅಧ್ಯಕ್ಷರು.—ಉತ್ತರದ ಪ್ರತಿಗಳನ್ನು ಮುಂಚಿತವಾಗಿ ಏಕೆ ಕೊಡುವುದಿಲ್ಲ ಪ್ರತಿ ದಿವಸವೂ ನಿಮಗೆ ಹೇಳುವುದಕ್ಕಾಗುತ್ತದೆಯೇ? I am very sorry ಯಾವುದೇ ಹೇಳಿಕೆಯನ್ನು ಇಲ್ಲಿ

ಮಾಡುವುದಿದ್ದರೆ, ಅದರ ಪ್ರತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಸರಬರಾಜು ಮಾಡಬೇಕೆಂದು ಈಗಾಗಲೇ ಎಲ್ಲರಿಗೂ ತಿಳಿಸಲಾಗಿದೆ. ಹಾಗಿದ್ದರೂ ನೀವು ಸಾಕಷ್ಟು ಉತ್ತರದ ಪ್ರತಿಗಳನ್ನು ಒದಗಿಸಲಿಲ್ಲ ಅಂದರೆ You have no control over your Department. ಇನ್ನೊಮ್ಮೆ ಈ ತರಹ ಮಾಡಬೇಡಿ

ಶ್ರೀ ಬಿ.ಎಸ್. ಯಡಿಯೂರಪ್ಪ.—ನಮಗೆ ಆ ಸ್ಟೇಟ್‌ಮೆಂಟ ನ ಕಾಪಿಗಳನ್ನು ಕೊಡ್ಲಿಲ್ಲವಲ್ಲ.

ಅಧ್ಯಕ್ಷರು.—ಆಯಿತು ಸಂಬಂಧಪಟ್ಟ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚಿತವಾಗಿ ಅವರು ಸಾಕಷ್ಟು ಉತ್ತರದ ಪ್ರತಿಗಳನ್ನು ಒದಗಿಸಿದ್ದಾರೋ ಅಥವಾ ಇಲ್ಲವೊ ಎಂಬುದನ್ನು ಮೊದಲೇ ತಿಳಿದುಕೊಂಡು ನಿಮಗೆ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ಉತ್ತರದ ಪ್ರತಿಗಳು ಒದಗಿಸಿರಲಿಲ್ಲ ಅಂದರೆ ಆ ಪ್ರಸ್ತಾಪವನ್ನು ಮುಂದಕ್ಕೆ ಹಾಕುತ್ತೇನೆ. ಇದರಲ್ಲೂ ಉತ್ತರದ ಪ್ರತಿಗಳನ್ನು ಸರಬರಾಜು ಮಾಡದೇ ಇರುವುದರಿಂದ ಮುಂದಕ್ಕೆ ಹಾಕಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಯಾವಾಗ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು.

ಅಧ್ಯಕ್ಷರು.—ಈ ಸಭೆಗೆ ಹಾಗೂ ಸಂಬಂಧಪಟ್ಟ ಮಾನ್ಯ ಸದಸ್ಯರಿಗೆ ಉತ್ತರದ ಪ್ರತಿಗಳನ್ನು ಒದಗಿಸಿಕೊಡತಕ್ಕಂತಹದ್ದು ಅವರ ಕರ್ತವ್ಯ. ಅದನ್ನು ಒದಗಿಸಿ ಕೊಡಬೇಕೆಂದು ಅವರಿಗೆ ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ —ಯಾವಾಗ ಇದನ್ನು ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು.—ನಾಳೆ ತೆಗೆದುಕೊಳ್ಳೋಣ.

ಶ್ರೀ ಜಿ. ಬಸವಲಿಂಗಪ್ಪ —ನಾಳೆ ಬೇಡ ಮಧ್ಯಾಹ್ನ ೪ ಗಂಟೆಗೆ ಹಾಕಿ.

ಅಧ್ಯಕ್ಷರು.—ಆಗಬಹುದು. ೧ ೪ ಗಂಟೆಗೆ ಇದನ್ನು ತೆಗೆದುಕೊಳ್ಳಲಾಗುವುದು.

Re Inconvenience caused to the poor villagers in fixing the limit of 10 Kgs. of rice per Ration Card under I R.D.P.

SRI R. YENKATARAMAIAH.—I call the attention of the Hon"ble Minister for Food and Civil Supplies regarding inconvenience caused to the poor villagers in fixing the limits of 10 Kgs. of Rice per Ration Card under I.R.D.P.

SRI B. BASAVANNAPPA (Minister for Food and Civil Supplies).—Sir, with your kind permission, will make the following statement.

ಅಗ್ಗದ ದರದಲ್ಲಿ ಆಹಾರ ಧಾನ್ಯಗಳನ್ನು ಹಂಚುವ ಯೋಜನೆಗೆ ಐ.ಆರ್.ಡಿ.ಪಿ. ಯಲ್ಲಿ ವಿವರಿಸಿದ ಸೂತ್ರಗಳನ್ನು ಅನುಸರಿಸಲು ಸರ್ಕಾರ ತೀರ್ಮಾನಿಸಿದೆ. ಇದೇ ಸೂತ್ರವನ್ನು ಬಡತನ ರೇಖೆಯ ಕೆಳಗಿರುವ ಕುಟುಂಬಗಳನ್ನು ಗುರುತಿಸಲು ಕೇಂದ್ರ ಸರ್ಕಾರವು ಸೂಚಿಸಿರುತ್ತದೆ. ಇದರಂತೆ ಗ್ರಾಮಾಂತರ ಪ್ರದೇಶದಲ್ಲಿರುವ ವಾರ್ಷಿಕ ಆದಾಯ ೩೫೦೦ ರೂಪಾಯಿಗಳಿಗಿಂತ ಕಡಿಮೆ ಇರುವ ಎಲ್ಲಾ ಕುಟುಂಬಗಳಿಗೂ ಈ ಸೌಲಭ್ಯ ದೊರಕುವುದು, ಗ್ರಾಮಾಂತರ ಪ್ರದೇಶಗಳಲ್ಲಿ ೫೫ ಲಕ್ಷ ಕುಟುಂಬಗಳಿರುವುದಾಗಿ ಅಂದಾಜು ಮಾಡಲಾಗಿದೆ. ಈ ಪೈಕಿ ಸುಮಾರು ೨೭ ಲಕ್ಷ ಕುಟುಂಬಗಳಿಗೆ ಈ ಯೋಜನೆಯ ಸೌಲಭ್ಯ ದೊರಕುವುದು. ಇದು ಗ್ರಾಮೀಣ ಪ್ರದೇಶದ ಶೇಕಡ ೫೦ ರಷ್ಟು ಜನ ಸಂಖ್ಯೆಗೆ ಅನುಕೂಲವಾದಂತಾಗುತ್ತದೆ. ಇದು ಗ್ರಾಮಾಂತರ ಪ್ರದೇಶಗಳ ಎಲ್ಲಾ ಭಾಗಗಳಲ್ಲೂ ವಾಸಿಸುವ ಬಡತನದ ರೇಖೆಯ ಕೆಳಗಿರುವ ಕುಟುಂಬಗಳನ್ನೊಳಗೊಳ್ಳುತ್ತದೆ. ಈ ಯೋಜನೆಯನ್ನು ಈ ವರ್ಷ ಗ್ರಾಮಾಂತರ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಬಸವಣ್ಣಪ್ಪನವರು ಕೊಟ್ಟಂತಹ ಪೇಳಿಕೆಯ ಪ್ರಕಾರ ೩೫೦೦ ರೂ. ಅಲ್ಲ. ಅದು ೩೬೦೦ ರೂ ಎಂದು ಇತಬೇಕಾಗಿತ್ತು. ಜೊತೆಗೆ ನಾನು ಈ ಒಂದು ಪ್ರಶ್ನೆಯನ್ನು ಎತ್ತಿರುವ ಉದ್ದೇಶವೇನೆಂದರೆ, ಇತ್ತೀಚೆಗೆ ಸುತ್ತೋಲೆಯೊಂದನ್ನು ಕೊಟ್ಟಿದ್ದಾರೆ, ಎಲ್ಲ ಸರ್ಕಾರಿ ಅಧಿಕಾರಿಗಳು ಯಾವ ರೀತಿಯಿಂದ ೪೯ ಪರ್ಸೆಂಟ್ ಬಡತನ ರೇಖೆಯಿಂದ ಕೆಳಗಡೆ ಇರುವವರು ಇದ್ದಾರೆ, ಅವರಿಗೆ ಮಾತ್ರ ಈ ಒಂದು ಅನುಕೂಲವನ್ನು ಕೊಡಬೇಕು,